

ಕಾಗದದ ಮೇಲೆ ಕಪ್ಪಿಂಕಿನ ಹನಿ ಬಿದ್ದಂತಹ ಕಣ್ಣು. ಟೋಪಿ–ಗಡ್ಡಧಾರಿ ಗಂಡಸರು ಕಡಿಮೆ. ಅರಬರಂತೆ ಉದ್ದ ಗೌನಿಗೆ ಬದಲು, ಯೂರೋಪಿನ ಸೂಟು ಧರಿಸುವರು. ಬುರುಖಾಧಾರಿ ಹೆಂಗಳೆಯರೂ ವಿರಳ. ತಲೆಗೂದಲಷ್ಟೆ ಮುಚ್ಚುವಂತೆ ಹಿಜಾಬ್ ಹಾಕಿ, ಜೀನ್ಸ್ ತೊಟ್ಟು ಅಂಗೈಯಲ್ಲಿ ಮೊಬೈಲ್ ಹಿಡಿದು, ಗಾಳಿಯಲ್ಲಿ ಚಿಮ್ಮುವ ಬಾಣಗಳಂತೆ ಸಾಗುವ, ಕಾರು ಚಲಾಯಿಸವ ಹುಡುಗಿಯರನ್ನು ಎಲ್ಲೆಡೆ ಕಾಣಬಹುದು. ವಯಸ್ಕ ಹೆಂಗಳೆಯರು ಗುಂಪಾಗಿ ಹೋಟೆಲಗಳಲ್ಲಿ ಕೂತು, ಉಣ್ಣುತ್ತ, ಐಸ್‌ಕ್ರೀಮ್ ಮೆಲ್ಲುತ್ತ ಹರಟುತ್ತಿರುತ್ತಾರೆ.

ಟರ್ಕಿಯ ಹಮಾಮುಗಳಂತೂ ಲೋಕಪ್ರಸಿದ್ಧ. ಹಳೆಯ ವರ್ಣಚಿತ್ರಗಳನ್ನು ನೋಡಿದರೆ – ಹುಕ್ಕಾಸೇವನೆ, ನಗ್ನತೆ, ಹರಟೆ, ಸಂಗೀತದಿಂದ ಈ ಸ್ನಾನಗೃಹಗಳು ಸ್ತ್ರೀವಿಲಾಸದ ತಾಣಗಳೂ ಆಗಿದ್ದವೆಂದು ತಿಳಿಯುವುದು.

ಟರ್ಕಿ ಮಾರ್ಜಾಲಪ್ರಿಯರ ದೇಶ. ಎಲ್ಲೆಲ್ಲೂ ಬಣ್ಣಬಣ್ಣದ ಅಂಗೋರ ಬೆಕ್ಕುಗಳು! ಅವುಗಳ ಹಳದಿ ನೀಲಿ ಕಣ್ಣುಗಳನ್ನು ನೋಡುತ್ತಿದ್ದರೆ ಮೈ ಝುಂ ಎನ್ನುತ್ತದೆ. ಇಸ್ತಾನಬುಲಿಗರು ತಮ್ಮ ಬೆಕ್ಕುಗಳಂತೆಯೇ ವಿಲಾಸಪ್ರಿಯರು. ರಸ್ತೆಬದಿಯ ಚಹ–ಕಾಫಿ ಅಂಗಡಿಗಳ ಮುಂದೆ ಪಗಡೆ ಹಾಸುಳ್ಳ ಮೇಜುಗಳಿದ್ದು, ಅಲ್ಲಿ ಚಹ ಹೀರುತ್ತ, ಸಿಗರೇಟು ಝುರಕಿ ಎಳೆಯುತ್ತ, ಶತಮಾನಗಳಿಂದ ಮನೆಗೆ ಹೋಗದೆ ನಿರಾಳಭಂಗಿಯಲ್ಲಿ ಕೂತಿರುವಂತಹ ವ್ಯಸನಿಗಳನ್ನೂ ನೋಡಬಹುದು. ಬೀದಿಯುದ್ದಕ್ಕೂ ತಂಬಾಕದ ಅಂಗಡಿಗಳಿವೆ. ಇವಕ್ಕೆ ಥಂಡಿ ಹವಾಮಾನವೂ ಕಾರಣವಿರಬೇಕು. ಮಾರುಕಟ್ಟೆಯಲ್ಲಿದ್ದ ತರುಣರ ಕೈಯಲ್ಲಿ–ಕಿರುಸೊಂಟದ ಗಾಜುಬಟ್ಟಲಲ್ಲಿ ಚಹ, ಬೆರಳಲ್ಲಿ ಹೊಗೆಯಾಡುವ ಸಿಗಾರ್ ಮತ್ತು ಜಪಮಣಿ ಕಾಣುವುದು. ಇಲ್ಲಿನದು ಹಾಲಿಲ್ಲದ ಪರಿಮಳದ ಚಹ. ಕುಡಿದರೆ ನಾಲಗೆಗೆ ಮೆತ್ತಿಕೊಳ್ಳುವ ಗಸಿಯ ಬರಗಾಫಿ. ಇದಕ್ಕೇ ಇರಬೇಕು, ಕೆಂಪೇಗೌಡ ವಿಮಾನ ನಿಲ್ದಾಣಕ್ಕೆ ಇಳಿದೊಡನೆ ನಮ್ಮ ಗುಂಪಿನವರು ‘ಹಟ್ಟಿಕಾಫಿ’ಗೆ ನುಗ್ಗಿ, ಎಮ್ಮೆ ಕಲಗಚ್ಚು ಹೀರುವಂತೆ ಎರಡೆರಡು ಬಟ್ಟಲು ಕಾಫಿ ಕುಡಿದು, ಟರ್ಕಿಕಾಫಿಯ ಮೇಲೆ ಸೇಡು ತೀರಿಸಿಕೊಂಡರು.

ಜೆರುಸಲೇಮಿನಂತೆ ಇಸ್ತಾನಬುಲ್ ಕೂಡ ಬೆಟ್ಟಗಳ ಮೇಲೆ ಯೋಜನಾಬದ್ಧವಾಗಿ ಕಟ್ಟಿದ ರೋಮನ್ ನಗರ. ಈಗ ಪ್ರಾಚೀನ ಕೋಟೆ–ಅರಮನೆಗಳ ಜತೆ ಆಧುನಿಕ ಕಟ್ಟಡಗಳು ಇದ್ದು, ಸಹಬಾಳ್ವೆ ನಡೆಸುತ್ತಿವೆ. ವಾಸ್ತುಶಿಲ್ಪದಲ್ಲಿ ರೋಮನ್ ಮತ್ತು ಇಸ್ಲಾಮಿಕ್ ಶೈಲಿಗಳ ಬೆರಕೆಯಿದೆ. ಎಲ್ಲೆಡೆ ಸಾರ್ವಜನಿಕರ ವಿಶ್ರಾಂತಿಗಾಗಿ ಕಲ್ಲುಬೆಂಚು, ಮರದ ನೆರಳು, ಕುಡಿನೀರಿನ ವ್ಯವಸ್ಥೆ, ಪುಟಿವ ಕಾರಂಜಿಗಳು; ಮನೆಯಂಗಳದಲ್ಲಿ, ಕಿಟಕಿಯಲ್ಲಿ, ಬೀದಿದೀಪದ ಕಂಬಗಳಲ್ಲಿ ಹೂಕುಂಡಗಳು. ತಂಪುಹವೆಯಾದ ಕಾರಣ ವರ್ಷವಿಡೀ ಹೂವು ನಳಿಸುತ್ತಿರುತ್ತವೆ. ಬೆಟ್ಟಗಳ ಮೇಲಿನ ಹೋಟೆಲು ಉದ್ಯಾನಗಳಲ್ಲಿ ಕೂತು ಕೆಳಗೆ ಖಾರಿಯಲ್ಲಿ ಹರಿದಾಡುವ ನಾವೆಗಳನ್ನು ನೋಡುವುದು ಖುಷಿಕೊಡುತ್ತದೆ. ಒಂದು ದಿನ ಅರಮನೆಗೆ ಹೋದೆವು. ಅದೊಂದು ಝುಗಝುಗಿಸುವ ವಿಲಾಸಿ ಕಟ್ಟಡ. ಚಕ್ರವರ್ತಿ ಗಣ್ಯರನ್ನು ಬರಮಾಡಿಕೊಳ್ಳುವ ಹಜಾರವು ವೈಭವೋಪೇತವಾಗಿದೆ. ಇಷ್ಟವಾಗಿದ್ದು ಅರಮನೆಗೆ ಒತ್ತಿಕೊಂಡಿರುವ ಕಡಲು. ಪಾವಟಿಗೆಗೆ ಬಡಿಯುವ ಕಿರುಅಲೆಗಳು.

ಇಸ್ತಾನಬುಲ್‌ನಲ್ಲಿ ಎಲ್ಲಿ ನಿಂತರೂ ಬೆಟ್ಟಗಳ ಮೇಲಿರುವ ಮಸೀದಿಗಳ ಬೂದುಬಣ್ಣದ ಚೂಪುಮಿನಾರು ಗೋಚರಿಸುತ್ತವೆ. ಮಸೀದಿಗಳಿಗೆ ಕೋಟೆಯಂಥ ಗೋಡೆ. ಬೃಹದಾಕಾರದ ಕಮಾನು. ಗುಮ್ಮಟದ ಒಳಭಾಗದಲ್ಲೂ ಗಾಜಿನ ಜಾಲಂಧ್ರಗಳಲೂ ಬಿಡಿಸಿದ ವರ್ಣಚಿತ್ತಾರ. ಇಲ್ಲಿ ಲಿಂಗಭೇದವಿಲ್ಲ. ಮಹಿಳೆಯರೂ ನಮಾಜು ಸಲ್ಲಿಸುವರು. ಕೋಟಿ ಜನಸಂಖ್ಯೆಯಿರುವ ಶಹರದ ಸುಪ್ರಸಿದ್ಧ ಸಲೇಮಾನ್ ಮಸೀದಿಯೊಳಗೆ, ಶುಕ್ರವಾರದ ನಮಾಜಿಗೆ



ರುಚಿಪ್ರಿಯರ ಮರುಳುಗೊಳಿಸುವ ‘ಡೋನರ್ ಕಬಾಬ್’